**ದೋ.ಸಾ. : 56 ಪ್ರಾ.ಸಾ. :39**

ಸಾಕ್ಷಿಯ ಹೆಸರು : ಲಕ್ಷ್ಮಣ ಲಗ್ಮಪ್ಪ ಪೂಜಾರಿ

**ಸರಕಾರಿ ಅಭಿಯೋಜಕರು ದಂಡ ಪ್ರಕ್ರಿಯಾ ಸಂಹಿತೆ ಕಲಂ 311 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ಪುರಸ್ಕರಿಸಲ್ಪಟ್ಟ ಮೇರೆಗೆ ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆ.**

**ದಿನಾಂಕಃ 09-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

6. ದಿ.15-02-2014 ರಂದು ತನಿಖಾಧಿಕಾರಿಯಾದ ಚಾಸಾ-57 ರವರು ನನಗೆ ಮೃತನ ಮನೆಯನ್ನು ಪರಿಶೀಲಿಸಿ, ಪಂಚನಾಮೆ ಮಾಡಿಕೊಂಡು ಬರುವಂತೆ ಸೂಚಿಸಿದ ಮೇರೆಗೆ ನಾನು, ರಾಜೀವ್ ನಗರದ ಮೃತ ವೇಲು ಇಲ್ಲನ್‌ಗುಡಿ ರವರ ಮನೆಗೆ ಭೇಟಿ ನೀಡಿ, ಚಾಸಾ-10 ಮತ್ತು 11 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಸದರಿಯವರ ಸಮಕ್ಷಮ ಸ್ಥಳದಲ್ಲಿ ಹಾಜರಿದ್ದ ಮೃತನ ತಮ್ಮನ ಹೆಂಡತಿಯಾದ ಚಾಸಾ-29 ರವರ ಮೂಲಕ ಮನೆಯ ಬಾಗಿಲನ್ನು ತೆರೆಸಿ ಸದರಿ ಮನೆಯನ್ನು ಪರಿಶೀಲಿಸಿದಾಗ, ಮನೆಯ ಬೆಡ್ ರೂಮಿನಲ್ಲಿ ಮಂಚದ ಮೇಲೆ ಒಂದು ಕಪ್ಪು ಬಣ್ಣದ ನೋಕಿಯಾ ಮೊಬೈಲ್ ಸಿಕ್ಕಿದ್ದು, ಅದು ಚಾಲೂ ಸ್ಥಿತಿಯಲ್ಲಿ ಇತ್ತು ಮತ್ತು ಅದರಲ್ಲಿ ಒಂದು ಏರ್ಟೆಲ್ ಮತ್ತು ಐಡಿಯಾ ಸಿಮ್‌ಗಳು ಇದ್ದವು.

7. ಅದೇ ಬೆಡ್ ರೂಮಿನ ಪೂರ್ವದ ಗೋಡೆಯಲ್ಲಿನ ಶೆಲ್ಫ್ ನಲ್ಲಿ ಪುಸ್ತಕ ಹಾಗೂ ಇತರೇ ಸಾಮಾನುಗಳು ಇದ್ದು, ಅಲ್ಲಿ ಮೂರು ಮೊಬೈಲ್ ಸೆಟ್ ಗಳೂ ಸಹ ಇದ್ದವು. ಅವುಗಳಲ್ಲಿ ಒಂದು G-Five ಕಂಪನಿಯ ಮೊಬೈಲ್ ಇದ್ದು, ಅದು ಚಾಲೂ ಸ್ಥಿತಿಯಲ್ಲಿ ಇದ್ದು ಆದರೆ ಅದಕ್ಕೆ ಸಿಮ್ ಇರಲಿಲ್ಲ. ಮತ್ತೊಂದು ನೋಕಿಯಾ ಕಂಪನಿಯ ಮೊಬೈಲ್ ಇದ್ದು, ಅದು ಚಾಲೂ ಸ್ಥಿತಿಯಲ್ಲಿ ಇದ್ದು, ಅದಕ್ಕೂ ಸಹ ಸಿಮ್ ಇರಲಿಲ್ಲ. ನಂತರ ಮತ್ತೊಂದು ನೋಕಿಯಾ ಕಂಪನಿಯ ಮೊಬೈಲ್ ಇದ್ದು, ಅದೂ ಸಹ ಚಾಲೂ ಸ್ಥಿತಿಯಲ್ಲಿ ಇದ್ದು, ಅದಕ್ಕೆ ಸಿಮ್ ಇರಲಿಲ್ಲ. ಸದರಿ ಮೊಬೈಲುಗಳನ್ನು ಜಪ್ತುಪಡಿಸಿಕೊಳ್ಳಲು ತನಿಖಾಧಿಕಾರಿಯ ಬಳಿ ವಿಚಾರಿಸಲಾಗಿ, ಸದರಿಯವರ ಸೂಚನೆಯ ಮೇರೆಗೆ ಸದರಿ ಎಲ್ಲಾ ಮೊಬೈಲುಗಳಿಗೆ 2B1, 2B2, 2B3, 2B4 ಎಂದು ಗುರುತಿಸಿ, ಅವುಗಳ ಮೇಲೆ ಪಂಚರಿಂದ ಸಹಿ ಪಡೆದುಕೊಂಡಿರುತ್ತೇನೆ. ಬೆಡ್ ರೂಮ್ ನಲ್ಲಿಯ

ಅಲ್ಮೆರಾವನ್ನು ಚಾಸಾ-29 ರವರು ಪರಿಶೀಲಿಸಿದಾಗ, ಅದರಲ್ಲಿ ರೂ.4,020/- ನಗದು ಹಣ ಮತ್ತು ಬೆಳ್ಳಿಯ ಹಾಗೂ ಬಂಗಾರದ ಆಭರಣಗಳು ಇದ್ದು, ಅವುಗಳನ್ನು ಅಕ್ಕಸಾಲಿಗರಿಂದ ಪರಿಶೀಲಿಸಿ, ನಂತರ ಹಣವನ್ನು ಮತ್ತು ಆಭರಗಳನ್ನು ಚಾಸಾ-29 ರವರಿಗೆ ಬಿಟ್ಟುಕೊಟ್ಟಿರುತ್ತೇವೆ. ನಂತರ ಪಂಚನಾಮೆಯನ್ನು 5.45 ರಿಂದ 6.45 ರವರೆಗೆ ಮಾಡಿರುತ್ತೇವೆ ಹಾಗೂ ಸದರಿ ಪಂಚನಾಮೆಗೆ ಪಂಚರ ಸಹಿ ಪಡೆದಿರುತ್ತೇನೆ. ಸಾಕ್ಷಿಯು ತಾನು ಮಾಡಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-20(ಈ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡಿರುವ ಮುದ್ದೆಮಾಲುಗಳನ್ನು ಈಗಾಗಲೇ ಎಂ.ಓ-22 ರಿಂದ 25 ಎಂದು ಗುರುತಿಸಲಾಗಿದ್ದು, ಅವುಗಳನ್ನು ಸಾಕ್ಷಿಯು ವಿ.ಸಿ.ಯ ಮೂಲಕ ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಆನಂತರ ಪಂಚನಾಮೆಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-**

8. ಪಂಚನಾಮೆಯ ಸಮಯದಲ್ಲಿ ಮನಯ ಹೊರಗೆ ಎಷ್ಟು ಜನರು ಸೇರಿದ್ದರು ಎಂದರೆ ಸಾಕ್ಷಿಯು ಸುಮಾರು 25-30 ಜನರು ಸೇರಿರಬಹುದು, ಆದರೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಮನೆಯ ಒಳಗೆ ನಾನು, ಪಂಚರು ಮತ್ತು ಚಾಸಾ-29 ಭಾಗ್ಯಲಕ್ಷ್ಮಿ ರವರು ಹೋದೆವು. ತನಿಖಾಧಿಕಾರಿಯವರು ನನಗೆ ಯಾವುದೇ ಪಂಚನಾಮೆ ಮಾಡಲು ಸೂಚಿಸಿಲ್ಲ ಹಾಗೂ ನಾನು ವೇಲು ಇಲ್ಲನ್‌ಗುಡಿ ರವರ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದ ನಂತರ ಯಾವುದೇ ಪಂಚರನ್ನು ಕರೆಸಿಲ್ಲ ಹಾಗೂ ಚಾಸಾ-29 ರವರು ಮನೆಯ ಬಾಗಿಲನ್ನು ತೆರೆದು ತೋರಿಸಿಲ್ಲ ಹಾಗೂ ನಾನೂ ಸಹ ನಿಪಿ-20 ರಂತೆ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಮೊಬೈಲುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.